ಮತ್ತು ಕಂಟ್ರಾಕ್ಟರ್ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. 1975ನೇ ಇಸವಿ ಬಂದರೂ ಕೂಡ ಇಲ್ಲಿಯವರೆಗೆ ಸುಮ್ಮನೆ ಇದ್ದೀರಿ, ಇದಕ್ಕೆ ಏನು ವಿಶೇಷ ಕಾರಣ ಇದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ.—ಈ ಕಂಟ್ರಾಕ್ಟರ್‌ಗೆ 17—2—1973ನೇ ಇಸವಿಯಲ್ಲಿ ಆತನಿಗೆ ಫೈನರ್ ನೋಟೀಸ್ ಕೂಟ್ಟು ಮೆಷರ್‌ಮೆಂಟ್ ಎಲ್ಲಾ ತೆಗೆದುಕೊಂಡು ಅವನನ್ನು ಬಿಟ್ಟು ಬಿಟ್ಟಿದ್ದಾರೆ. ಒಟ್ಟು ಇದರ ಕೆಲಸ 55 ಸಾವಿರ ರೂಪಾಯಿನ ಅಂದಾಜು. ಈಗ 20 ಸಾವಿರ ರೂಪಾಯಿ ಅಷ್ಟೆ ಕೆಲಸವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರಿಗೆ ಫೈನ್ ಎಷ್ಟು ?

ಶ್ರೀ ಎಸ್. ಎಂ. ಕೃಷ್ಣ.—ಕಾನೂನು ಪ್ರಕಾರ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ. ಫೈನರ್ ಬಿಲ್ ಮಾಡಬೇಕಾದರೆ ಕಂಟ್ರಾಕ್ಟರದು ತಪ್ಪಾಗಿದ್ದರೆ ಆದರಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ಅವರು ನಹಿ ಹಾಕದೆ ಇದ್ದರೆ ಅವರ ಮೇಲೆ ಕ್ರಮ ಹೇಗೆ ಜರುಗಿಸುತ್ತೀರಾ ?

ಶ್ರೀ ಎಂ. ಎಂ. ಕೃಷ್ಣ.—ಈ ಕೇಸ್‌ನಲ್ಲಿ ಅವರಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇದು ಒಂದು ಅಡ್ಡಿಬಂದಿದೆ ಎಂದು ನನಗನ್ನಿಸುತ್ತದೆ.

ಶ್ರೀ ಎ. ಪಿ. ಮುನಿಸ್ವಾಮಿ.—ಅಡ್ಡಿ ಬಂದಿದೆ ಎಂದು ಹೇಳುತ್ತೀರಿ. ಅಡ್ಡಿ ಬರುವುದಕ್ಕೆ ಅವಕಾಶ ಕೊಟ್ಟಂತ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಕಂಟ್ರಾಕ್ಟರ್ ಬಾಕ್ ಲಿಸ್ಟ್ ಮಾಡಿದ್ದೀರಾ?

ಶ್ರೀ ಎಸ್.ಎಂ. ಕೃಷ್ಣ.—ಈ ಸಲಹೆಯನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಂತಹ ಅಧಿಕಾರಿಗಳ ಬಗ್ಗೆ ಸಲಹೆಯನ್ನು ಪರಿಶೀಲನೆಗೆ ತೆಗೆದುಕೊಂಡು ಕಾರ್ಯಗತ ಆಗುವುದಕ್ಕೆ ಎಷ್ಟು ಪಂಚವಾರ್ಷಿಕಯೋಜನೆಗಳು ತಮಗೆ ಬೇಕಾಗಬಹುದು?

## Market Price of Rice

289 **Sri A. G. KODGI** (Baindoor).—

Will the Minister for Food and Civil supplies be pleased to state :—

(*a*) the total food production in each district of the State for the year ending 30th June 1974 ;

(*b*) the average yield of paddy per acre in each district of the State during the year 1972-73 ;

(*c*) the market price of rice in each district of the State from 1—1—1974 to 31—7—1974 ?

**Smt. E. E VAZ** (Minister for Food and Civil Supplies).—

(*a*) Statement I placed on the Table of the House *

(*b*) Statement II placed on the Table of the House *

(c] Statement III placed on the Table of the House *

---

* Copies placed in the Karnataka Legislature Library *vide* No. 15A. dated 20-2-1975.

ಶ್ರೀ ಎ. ಜಿ. ಕೊಡಗಿ.— ತಾವು ಕೊಟ್ಟಿರುವ ಸ್ಟೇಟ್‌ಮೆಂಟ್ (1)ರಲ್ಲಿ ದಕ್ಷಿಣ ಕನ್ನಡಜಿಲ್ಲೆ ಉತ್ಪಾದನೆ ಬಹಳ ಕೊರತೆ ಪ್ರದೇಶ ಎಂದು ಒಪ್ಪಿಕೊಳ್ಳುತ್ತೀರಿ, ಅಲ್ಲಯ ಉತ್ಪಾದನೆ ಅರು ತಿಂಗಳಿಗೂ ಸಾಕಾಗುವುದಿಲ್ಲ ಎಂದು ನನ್ನ ಅಭಿಪ್ರಾಯ, ತಾವು ಏನು ಹೇಳುತ್ತೀರಿ?

ಶ್ರೀಮತಿ ಇ. ಇ. ವಾಜ್.— ಈ ವರ್ಷ ಅಷ್ಟೊಂದು ಕೊರತೆ ಆಗಿಲ್ಲ ಎಂದು ಅಧಿಕಾರಿಗಳ ರಿಪೋರ್ಟ್ ಮುಖಾಂತರ ನಮಗೆ ಗೊತ್ತಾಗುತ್ತದೆ.

ಶ್ರೀ ಎ. ಜಿ. ಕೊಡಗಿ.— ತಾವು ಸ್ಟೇಟ್‌ಮೆಂಟ್ 3ರಲ್ಲಿ ಮಾರ್ಕೆಟ್ ಧಾರಣೆ ವಿಚಾರವಾಗಿ ಕೊಟ್ಟಿರುವ ಅಂಕಿಅಂಶದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯೂ, ಎಲ್ಲಾ ಜಿಲ್ಲೆಗಿಂತಲೂ ಪ್ರತಿ ತಿಂಗಳು 15-1-1974ರಂದ 31-7-1974ರ ವರೆಗೆ ಕ್ವಿಂಟಾಲಿಗೆ ಹೆಚ್ಚು ಕಡಿಮೆ 100 ರೂಪಾಯಿ ವ್ಯತ್ಯಾಸ ಕಾಣುತ್ತಿದೆ, ಇದಕ್ಕೆ ಸರ್ಕಾರದ ಒಂದು ಅವ್ಯವಹಾರಿಕ ಧೋರಣೆಯೇ ಕಾರಣ. ಈ ಧೋರಣೆಯನ್ನು ತಾವು ಶೀಘ್ರವಾಗಿ ಬದಲಾಯಿಸಿ ದಕ್ಷಿಣ ಕನ್ನಡ ಜನರಿಗೂ ಕೂಡ ಯೋಗ್ಯ ಬೆಲೆಗೆ ಆಹಾರ ಧಾನ್ಯ ದೊರಕುವಂತೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.— ನಾನು ಹೇಳಿದ ಪ್ರಕಾರ ಅಷ್ಟೊಂದು ವ್ಯತ್ಯಾಸ ಕಾಣುತ್ತಿಲ್ಲ. ಸಾಮಾನ್ಯವಾಗಿ ಒರಟು ಧಾನ್ಯಕ್ಕೆ ಚಿಕ್ಕಮಗಳೂರು, ಕೊಡಗು ಎಲ್ಲಾ ಒಂದೇ ತರಹ ಇದೆ. ಶಿವಮೊಗ್ಗದಲ್ಲ ರೂ. 1-95 ಇರುವ ಅಕ್ಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡೂ ಚಿಲ್ಲರೆ ರೂಪಾಯಿ ಇರಬಹುದು.

ಶ್ರೀ ಎ ಜಿ. ಕೊಡಗಿ. — ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನುಮಾರು ಕ್ವಿಂಟಾಲಿಗೆ 50 ರೂಪಾಯಿಯಿಂದ 100 ರೂಪಾಯಿಯವರೆಗೆ ಬೆಲೆ ಹೆಚ್ಚಿದೆ. ಈ ಅವ್ಯವಹಾರಕ್ಕೆ ಸರ್ಕಾರದ ಧೋರಣೆಯೇ ಕಾರಣ ಆದ್ದರಿಂದ ಇನ್ನು ಮುಂದೆಯಾದರೂ ಬೇರೆ ಜಿಲ್ಲೆಗಳಲ್ಲಿ ಅಹಾರಧಾನ್ಯ ದೊರಕುವಂತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಆಹಾರ ಧಾನ್ಯ ದೊರಕುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.— ಅಷ್ಟೊಂದು ವ್ಯತ್ಯಾಸ ಇದೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಶಿವಮೊಗ್ಗ ಜಿಲ್ಲೆ ಸದಸ್ಯರು ಇಲ್ಲೇ ಇದ್ದಾರೆ ಅವರು ಹೊರಗೆ ಬಡಬಾರದು ಹಾಗೆ ಹೇಳುತ್ತಿದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲ ಹೆಚ್ಚು ಧಾನ್ಯ ಒದಗಿಸಲಾಗಿದೆ 9 ಸಾವಿರ ಕ್ವಿಂಟಾಲ್ ಅಕ್ಕಿ, 8 ಸಾವಿರ ಕ್ವಿಂಟಾಲ್ ಗೋಧಿಯನ್ನು ಎಷ್ಟರಮಟ್ಟಿಗೆ ಸಾಧ್ಯ ಇದೆ ಅಷ್ಟನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿ ಅವರ ಬೆಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಮಾಡುತ್ತಿದ್ದೇವೆ. ಅಲ್ಲದೆ ಶಿವಮೊಗ್ಗದಲ್ಲ ಸ್ವಲ್ಪ ಕಡಿಮೆ ಎಂದು ಕಂಡುಬಂದರೆ ಅಲ್ಲಿ ಬೆಳೆ ಜಾಸ್ತಿ ಬರುತ್ತದೆ. ಹೆಚ್ಚು ಬೆಳೆ ಬಂದಲ್ಲಿ ಬೆಲೆ ಕಡಿಮೆ ಇರುತ್ತದೆ.

ಶ್ರೀ ಯು. ಟಿ. ಫರೀದ್.— ೨೬ಲ್ಲ ಕ್ವಿಂಟಾಲ್ ಬೆಲೆ ಹೇಗಿದೆ? ಈಗಿನ ಪ್ರಸಕ್ತ ಕ್ರಯ ಎಷ್ಟು?

ಶ್ರೀಮತಿ ಇ. ಇ. ವಾಜ್. — ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ವಿಂಟಾಲ್ ಇರುವುದಿಲ್ಲ, ಅಲ್ಲಿ ಮುಡ್ಡಿ ಲೆಕ್ಕದಲ್ಲಿ ಕೊಡುತ್ತಾರೆ. ಅದು 95 ರೂಪಾಯಿಂದ 100 ರೂಪಾಯಿವರೆಗೆ ಇದೆ. ಎಲ್ಲಾ ಜಿಲ್ಲೆಗಳಲ್ಲೂ ಅದೇ ಕ್ರಯ ಇದೆ.

## Communication Roads in Villages of Savanur and Shirahatti Taluks

297 Sri V. V. WAI (Shirahatti).—

Will the Minister for Public Works be pleased to state:—

(*a*) whether it has come to the notice of the Government that a bridge is being constructed to Varada river near Hosaritti;

(*b*) if so, the reasons for the slow progress of the said work;

(*c*) whether it has come to the notice of the Government that there is no communication to the Villages of Savanur and Shirahatti Taluks even though the bride was constructed spending lakhs of rupees;

(*d*) whether the Government has proposed to construct communication roads atleast in future?